# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :573 |
| ಉತ್ತರಿಸಬೇಕಾದ ದಿನಾಂಕ | :16.09.2022. |
| ಸದಸ್ಯರ ಹೆಸರು | :ಶ್ರೀ ಎಸ್ ವ್ಹಿ ಸಂಕನೂರ(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಮಾನ್ಯ ರೇಷ್ಮೆ,ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರಾಗಿ ಸಂಚಿತ ನಿಧಿ ಮತ್ತು ಗೌರವ ಧನದ ಆಧಾರದ ಮೇಲೆ 10-15 ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಿದ್ದವರನ್ನು ಖಾಯಂಗೊಳಿಸುವ ಕುರಿತು ಸರ್ಕಾರ ಸೂಕ್ತ ನಿಯಮಾವಳಿಗಳನ್ನು ರೂಪಿಸಲು ಕ್ರಮ ಕೈಗೊಂಡಿದೆಯೇ?: ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ: (ಮಾಹಿತಿ ನೀಡುವುದು) | ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರಾಗಿ ಸಂಚಿತ ನಿಧಿ ಮತ್ತು ಗೌರವ ಧನದ ಆಧಾರದ ಮೇಲೆ 10-15 ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಿದ್ದವರನ್ನು ಖಾಯಂಗೊಳಿಸುವ ಕುರಿತು ಸೂಕ್ತ ನಿಯಮಾವಳಿಗಳನ್ನು ರೂಪಿಸಲು ಪರಿಶೀಲಿಸಲಾಗುತ್ತಿದೆ.<br><br>ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 1995ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ನೇಮಕಗೊಂಡು ಮುಂದುವರೆಸಲ್ಪಟ್ಟ ತರಬೇತುದಾರರನ್ನು ಖಾಯಂಗೊಳಿಸುವ ಕುರಿತು ಈ ಹಿಂದೆ ಆರ್ಥಿಕ ಇಲಾಖೆ, ಕಾನೂನು ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳೊಂದಿಗೆ ಸಮಾಲೋಚಿಸಲಾಗಿದ್ದು ಕ್ರೀಡಾ ತರಬೇತುದಾರರ ವೃತ್ತಿಯು ಒಂದು ಕೌಶಲ್ಯಾಧರಿತ ಪರಿಣಿತಿ ಹೊಂದಿದ ವೃತ್ತಿಯಾಗಿದ್ದು ಇದನ್ನು ಖಾಯಂ ಆಗಿ ನೇಮಕ ಮಾಡುವುದು ಸೂಕ್ತವಲ್ಲ ಹಾಗೂ ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸಕ್ರಮಾತಿ / ವಿಲೀನಾತಿಗೆ ಅವಕಾಶವಿಲ್ಲವೆಂದು ಸದರಿ ಇಲಾಖೆಗಳು ತಿಳಿಸಿವೆ. |
| ಆ) | ಕರ್ನಾಟಕ ಕ್ರೀಡಾ ಪ್ರಾಧಿಕಾರದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರು ಹಾಗೂ ಇತರೆ ಸಿಬ್ಬಂದಿಗಳ ಕುರಿತು ಸಿ &ಆರ್ ನಿಯಮಾವಳಿ ಪ್ರಕ್ರಿಯೆ ಪೂರ್ಣಗೊಂಡು ಸರ್ಕಾರದ ಒಪ್ಪಿಗೆಯನ್ನು ಪಡೆದಿದೆಯೇ? (ಮಾಹಿತಿ ನೀಡುವುದು) | 2010-11ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತುದಾರರು ಮತ್ತು ಇತರೆ ಸಿಬ್ಬಂದಿಗಳ ಕುರಿತು ವೃಂದ ಮತ್ತು ನೇಮಕಾತಿ ನಿಯಮಾವಳಿ ರಚಿಸುವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದು ನ್ಯಾಯಾಲಯದ ತೀರ್ಪಿನನ್ವಯ ಕ್ರಮವಹಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ ಆರ್ಥಿಕ ಇಲಾಖೆಯು ಕ್ರೀಡಾ ತರಬೇತುದಾರರ ವೃತ್ತಿಯು ಒಂದು ಕೌಶಲ್ಯಾಧರಿತ ಪರಿಣಿತಿ ಹೊಂದಿದ ವೃತ್ತಿಯಾಗಿದ್ದು ಇದನ್ನು ಖಾಯಂ ಆಗಿ ನೇಮಕ ಮಾಡುವುದು ಸೂಕ್ತವಲ್ಲ ವೆಂದು ಅಭಿಪ್ರಾಯ ನೀಡಿರುತ್ತದೆ. |

| | | |
|---|---|---|
| | | ಮುಂದುವರೆದು, ದಿನಾಂಕ 18-08-2022 ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಲು ಶಿಕ್ಷಣ ಇಲಾಖೆಯ ಮಾದರಿಯಲ್ಲಿ **One time relaxation**ರೊಂದಿಗೆ **Special Recruitment Rules** ರೂಪಿಸಲು ಕ್ರಮಹಿಸುವಂತೆ ಸೂಚಿಸಿರುತ್ತಾರೆ.<br><br>ಅದರಂತೆ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿದ್ದು, ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ದಿನಾಂಕ 13-09-2022 ರ ಪತ್ರದಲ್ಲಿ ಶಿಕ್ಷಣ ಇಲಾಖೆಯಲ್ಲಿ ಈ ವಿಷಯದ ಕುರಿತು ಯಾವುದೇ ಕ್ರಮಗಳನ್ನು ವಹಿಸಿರುವುದಿಲ್ಲವೆಂಬ ಮಾಹಿತಿಯನ್ನು ನೀಡಿರುತ್ತಾರೆ.<br><br>ಆದುದರಿಂದ, **One time relaxation**ರೊಂದಿಗೆ **Special Recruitment Rules** ರೂಪಿಸುವ ಸಂಬಂಧ ಕಾನೂನು ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

**ವೈಎಸ್ ಡಿ/ಸಿಡಿಎನ್/106/2022**

**(ಡಾ|| ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು